# ಜೀವಗಳೊಂದಿಗೆ ಚೆಲ್ಲಾಟ ಸರಿಯಲ್ಲ

ವಿಧಾನಮಂಡಲದ ಉಭಯ ಸದನಗಳ ಮುಂದೆ 'ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ನಿಯಂತ್ರಣ ತಿದ್ದುಪಡಿ ಮಸೂದೆ' ('ಕೆಪಿಎಂಇ') ಮಂಡನೆಗೊಳ್ಳುವ ಮುನ್ನ ನಡೆದ ನಾಟಕೀಯ ಘಟನೆಗಳು ನಾಗರಿಕ ಸಮಾಜ ತಲೆತಗ್ಗಿಸುವಂತಿವೆ. ಸಾರ್ವಜನಿಕರ ಹಿತ ಕಾಪಾಡಬೇಕಾದ ಸರ್ಕಾರ ಹಾಗೂ ವೈದ್ಯವೃಂದ ಇಬ್ಬರ ಹೊಣೆಗೇಡಿತನವೂ ಈ ಪ್ರಕರಣದಿಂದ ಅನಾವರಣಗೊಂಡಿದೆ. ಮಸೂದೆಯ ಕುರಿತು ಉಭಯಪಕ್ಷಗಳು ತಳೆದ ಕಠಿಣ ನಿಲುವಿಗೆ ಅಮಾಯಕ ರೋಗಿಗಳು ನಾಡಿನ ವಿವಿಧ ಭಾಗಗಳಲ್ಲಿ ಜೀವ ಕಳೆದುಕೊಂಡಿದ್ದಾರೆ.

'ಕೆಪಿಎಂಇ' ಮಸೂದೆ ಜನಪರವಾದುದು ಎನ್ನುವುದರಲ್ಲಿ ಯಾವ ಅನುಮಾನವೂ ಇಲ್ಲ. ಈ ಮಸೂದೆಯನ್ನು ಜಾರಿಗೊಳಿಸುವ ನಿಟ್ಟಿನಲ್ಲಿ ಸರ್ಕಾರ ಹಾಗೂ ಆರೋಗ್ಯ ಸಚಿವ ಕೆ.ಆರ್. ರಮೇಶ್ ಕುಮಾರ್ ಕಾಳಜಿಯೂ ಮೆಚ್ಚತಕ್ಕಂತಹದ್ದು. ಖಾಸಗಿ ಆಸ್ಪತ್ರೆಗಳ ಹಣ ಲಾಲಸೆಗೆ ಬಡವರು ಮಾತ್ರವಲ್ಲದೆ, ಎಲ್ಲ ವರ್ಗದ ಜನರೂ ಮಿಕಗಳಾಗಿದ್ದಾರೆ. ಆಸ್ಪತ್ರೆಗೆ ಹೋಗಿ ಹಣ–ಆರೋಗ್ಯ ಎರಡನ್ನೂ ಕಳೆದುಕೊಂಡವರ ದಾರುಣ ಕಥೆಗಳಿಗೆ ಕೊನೆಮೊದಲಿಲ್ಲ. ರೋಗಿ ಸಾವಿಗೀಡಾದ ನಂತರವೂ ಚಿಕಿತ್ಸೆ ಮುಂದುವರಿಸಿರುವ ಉದಾಹರಣೆಗಳೂ ಇವೆ. ವೈದ್ಯಕೀಯ ಕ್ಷೇತ್ರದಲ್ಲಿ ಸೇವೆಗೂ ಮಿಗಿಲಾಗಿ ವ್ಯಾಪಾರಿ ಉದ್ದೇಶಗಳೇ ಪ್ರಮುಖವಾದ ಸಂದರ್ಭದಲ್ಲಿ ಖಾಸಗಿ ಆಸ್ಪತ್ರೆಗಳಿಗೆ ನಿಯಂತ್ರಣ ಹೇರುವ ಮಸೂದೆ ಸ್ವಾಗತಾರ್ಹ. ಇದನ್ನು ಜನರ ನಿರೀಕ್ಷೆಗಳಿಗೆ ಸರ್ಕಾರದ ಮಾನವೀಯ ಸ್ಪಂದನದ ರೀತಿಯಲ್ಲಿ ಗುರ್ತಿಸಬಹುದು. ಆದರೆ, ಮಸೂದೆಯನ್ನು ವಿಧಾನಮಂಡಲದ ಮುಂದೆ ಮಂಡಿಸಲು ಸರ್ಕಾರ ಅನುಸರಿಸಿದ ನೀತಿ ಪ್ರಬುದ್ಧ ರಾಜಕಾರಣಕ್ಕೆ ತಕ್ಕುದಾಗಿರಲಿಲ್ಲ. ಮಸೂದೆಗೆ ಎದುರಾದ ವಿರೋಧ ಅನಿರೀಕ್ಷಿತವೇನೂ ಆಗಿರಲಿಲ್ಲ. ಮಸೂದೆಯನ್ನು ಮಂಡಿಸುವ ಮುನ್ನ ಅದನ್ನು ಸಾರ್ವಜನಿಕ ಚರ್ಚೆಗೆ ಒಳಪಡಿಸುವ ಮೂಲಕ ವಾತಾವರಣವನ್ನು ತನ್ನ ಪರವಾಗಿ ರೂಪಿಸಿಕೊಳ್ಳುವ ಅವಕಾಶ ಸರ್ಕಾರಕ್ಕಿತ್ತು. ಅಂತೆಯೇ ಖಾಸಗಿ ಆಸ್ಪತ್ರೆಗಳ ಜೊತೆ ಮಾತುಕತೆ ನಡೆಸಿ ಅವರ ಮನವೊಲಿಸುವ ಪ್ರಯತ್ನವನ್ನೂ ನಡೆಸಬೇಕಿತ್ತು. ಇದಕ್ಕೆ ಬದಲಾಗಿ ಮಸೂದೆಯ ಮಂಡನೆಯನ್ನು ಸರ್ಕಾರ ತನ್ನ ಪ್ರತಿಷ್ಠೆಯನ್ನಾಗಿ ಪರಿಗಣಿಸಿತು. ವೈದ್ಯರ ಒಕ್ಕೂಟ ಕೂಡ ಮಸೂದೆಗೆ ತನ್ನ ವಿರೋಧ ದಾಖಲಿಸುವುದನ್ನು ಪ್ರತಿಷ್ಠೆಯ ಪ್ರಶ್ನೆಯನ್ನಾಗಿಸಿಕೊಂಡಿತು. ಇದರ ಫಲ ಅನುಭವಿಸಿದ್ದು ಸಾರ್ವಜನಿಕರು.

ಮಸೂದೆಯ ವಿರೋಧಕ್ಕೆ ಸಂಬಂಧಿಸಿದಂತೆ ವೈದ್ಯರು ಅನುಸರಿಸಿದ ನೀತಿಯೂ ಅವರ ವೃತ್ತಿಘನತೆಗೆ ತಕ್ಕುದಾಗಿರಲಿಲ್ಲ. ಎಂಥ ಸಂದರ್ಭದಲ್ಲಿಯೂ ರೋಗಿಗೆ ಚಿಕಿತ್ಸೆ ನೀಡುವುದು ವೈದ್ಯರ ಪ್ರಾಥಮಿಕ ಕರ್ತವ್ಯ. ಈ ಬದ್ಧತೆಯಿಂದ ಅವರು ದೂರ ಸರಿದಿದ್ದು 'ಸೇವೆ'ಯ ಅರ್ಥ ಬದಲಾಗಿರುವುದನ್ನು ಸೂಚಿಸುವಂತಿದೆ. ಮಸೂದೆ ವೈದ್ಯರಲ್ಲಿ ಆತಂಕ ಮೂಡಿಸುವಂತಿದ್ದರೆ ಅದನ್ನು ವಿರೋಧಿಸಲಿಕ್ಕೆ ಕಾನೂನುಬದ್ಧವಾಗಿಯೇ ಸಾಕಷ್ಟು ಮಾರ್ಗಗಳಿದ್ದವು. ಮಸೂದೆಯ ನೆಪದಲ್ಲಿ ವೈದ್ಯಕೀಯ ಶಿಕ್ಷಣದ ನೆಪದಲ್ಲಿ ನಡೆಯುತ್ತಿರುವ ಹಣದ ಲೂಟಿಯನ್ನು ತಡೆಯುವಂತೆ ವೈದ್ಯರ ಒಕ್ಕೂಟಗಳು ಒತ್ತಾಯಿಸಬಹುದಿತ್ತು. ಆದರೆ, ಪ್ರಜಾಸತ್ತಾತ್ಮಕ ಸಾಧ್ಯತೆಗಳನ್ನು ಬಿಟ್ಟುಕೊಟ್ಟು ರೋಗಿಗಳ ಹಿತಾಸಕ್ತಿಯೊಂದಿಗೆ ಆಟವಾಡುವ ಧೋರಣೆಯನ್ನು ಅನುಸರಿಸಿದ್ದು ಯಾವುದೇ ಕಾರಣಕ್ಕೂ ಸಮರ್ಥನೀಯವಲ್ಲ. ವೈದ್ಯರು ಬೀದಿಗಿಳಿದು ನಡೆಸಿದ ಮುಷ್ಕರದಿಂದ ಯಾರಾದರೂ ಸಾವಿಗೀಡಾಗಿದ್ದರೆ ಅದರ ಪಾಪದ ಹೊಣೆಯನ್ನು ಹೊರುವುದಾಗಿ 'ಭಾರತೀಯ ವೈದ್ಯಕೀಯ ಸಂಘ'ದ ಕರ್ನಾಟಕ ಘಟಕದ ಅಧ್ಯಕ್ಷ ಡಾ.ಎಚ್.ಎನ್. ರವೀಂದ್ರ ಹೇಳಿದ್ದಾರೆ. ಹೀಗೆ ಬೀಸುಹೇಳಿಕೆ ನೀಡುವ ಮೂಲಕ ಅವರು ತಮ್ಮ ಬಳಗದ ಹೊಣೆಗೇಡಿತನವನ್ನು ಸಮರ್ಥಿಸಿಕೊಳ್ಳುವುದು ಸಾಧ್ಯವಿಲ್ಲ. ವೈದ್ಯರು ಮುಷ್ಕರ ನಡೆಸುವ ಮೂಲಕ ನಾಗರಿಕರಿಗೆ ಸಂವಿಧಾನ ನೀಡಿರುವ ಬದುಕುವ ಹಕ್ಕಿಗೆ ಧಕ್ಕೆ ತಂದಂತಾಗಿದೆ.

ದೀರ್ಘಕಾಲದ ಸಂಘರ್ಷ ಹಾಗೂ ಸಾವು ನೋವಿನ ಪ್ರಕರಣಗಳ ನಂತರ ಸರ್ಕಾರ ಹಾಗೂ ಮುಷ್ಕರ ನಿರತ ವೈದ್ಯರ ಸಂಘಟನೆಗಳು ಒಪ್ಪಂದವೊಂದಕ್ಕೆ ಬಂದಿವೆ. ಮಸೂದೆಗೆ ತಿದ್ದುಪಡಿ ತರಲು ಸರ್ಕಾರ ಒಪ್ಪಿಕೊಂಡಿದೆ. ಈ ತಿದ್ದುಪಡಿಗಳಿಂದಾಗಿ ವೈದ್ಯಕೀಯ ನಿರ್ಲಕ್ಷ್ಯದ ಸಂದರ್ಭದಲ್ಲಿ ವೈದ್ಯನಿಗೆ ಆಗಬಹುದಾಗಿದ್ದ ಜೈಲು ಶಿಕ್ಷೆಯನ್ನು ಸಡಿಲಿಸಲಾಗಿದೆ. ಸರ್ಕಾರದ ಯೋಜನೆಗಳಿಗೆ ಒಳಪಟ್ಟ ಸೇವೆಗಳಿಗೆ ಮಾತ್ರ ದರಪಟ್ಟಿ ಪ್ರಕಟಿಸುವುದಾಗಿ ಖಾಸಗಿ ಆಸ್ಪತ್ರೆಗಳ ಪ್ರತಿನಿಧಿಗಳು ಹೇಳಿದ್ದಾರೆ. ಈ ತಿದ್ದುಪಡಿಗಳನ್ನು ಗಮನಿಸಿದರೆ, ಮಸೂದೆಯ ಮೂಲ ಉದ್ದೇಶವೇ ತೆಳುವಾದಂತಿದೆ. ದುರ್ಬಲ ಮಸೂದೆ ಮಂಡನೆಯ ಮೂಲಕ ಸರ್ಕಾರ ಹಾಗೂ ಅದನ್ನು ಒಪ್ಪಿಕೊಳ್ಳುವ ಮೂಲಕ ವೈದ್ಯಕೀಯ ವೃಂದ ತಂತಮ್ಮ ಬೆನ್ನು ಚಪ್ಪರಿಸಿಕೊಳ್ಳಲು ಹೊರಟಿವೆ. ವೈದ್ಯಕೀಯ ಸೇವೆಗಳಿಗೆ ಸಂಬಂಧಿಸಿದಂತೆ ದೇಶಕ್ಕೆ ಮಾದರಿ ಆಗಬಹುದಾಗಿದ್ದ ಚಾರಿತ್ರಿಕ ಅವಕಾಶವೊಂದನ್ನು ಸರ್ಕಾರ ಕಳೆದುಕೊಂಡಿದೆ. ಮಸೂದೆಯ ಲಾಭ ಪಡೆಯಬೇಕಾಗಿದ್ದ ಶ್ರೀಸಾಮಾನ್ಯ ಎಂದಿನಂತೆ ಅಸಹಾಯಕನಾಗಿಯೇ ಉಳಿದಿದ್ದಾನೆ.

■ ರಘುನಾಥ ಚ.ಹ.

ಆಸ್ಪತ್ರೆಗೆ ಹೋಗಿ ಹಣ–ಆರೋಗ್ಯ ಎರಡನ್ನೂ ಕಳೆದುಕೊಂಡವರ ದಾರುಣ ಕಥೆಗಳಿಗೆ ಕೊನೆಮೊದಲಿಲ್ಲ. ರೋಗಿ ಸಾವಿಗೀಡಾದ ನಂತರವೂ ಚಿಕಿತ್ಸೆ ಮುಂದುವರಿಸಿರುವ ಉದಾಹರಣೆಗಳೂ ಇವೆ. ವೈದ್ಯಕೀಯ ಕ್ಷೇತ್ರದಲ್ಲಿ ಸೇವೆಗೂ ಮಿಗಿಲಾಗಿ ವ್ಯಾಪಾರಿ ಉದ್ದೇಶಗಳೇ ಪ್ರಮುಖವಾದ ಸಂದರ್ಭದಲ್ಲಿ ಖಾಸಗಿ ಆಸ್ಪತ್ರೆಗಳಿಗೆ ನಿಯಂತ್ರಣ ಹೇರುವ ಮಸೂದೆ ಸ್ವಾಗತಾರ್ಹ. ಆದರೆ ಸರ್ಕಾರ ಈ ಬಿಕ್ಕಟ್ಟನ್ನು ಇಷ್ಟೊಂದು ಅಪಕ್ವವಾಗಿ ನಿರ್ವಹಿಸಿದ್ದೇಕೆ? ಮನುಷ್ಯ ಜೀವಕ್ಕೆ ಬೆಲೆ ಇಲ್ಲವೆ?



ಈಶ್ವರ್